ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
**KARNATAK UNIVERSITY DHARWAD**
ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ವಿಭಾಗ
**D.P.A.R.**

NAAC Accredited with "A" Grade-2022

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಪಾವಟೆನಗರ, ಧಾರವಾಡ.
ದೂರವಾಣಿ ಸಂ.0836-2215349
Website : www.kud.ac.in

ಅ.ನಂ.ಕವಿವಿ/ಸಿಆಸುವಿ/ಶಿಕ್ಷಕೇತರ/10/2024/ 1124 ದಿನಾಂಕ: 20 AUG 2024

## ಸಾರ್ವಜನಿಕ ಪ್ರಕಟಣೆ

ಕರ್ನಾಟಕ ವಿಶ್ವವಿದ್ಯಾಲಯವು ದಿನಾಂಕ: 26.10.2023 ರಂದು ಹೊರಡಿಸಿದ ಬ್ಯಾಕಲಾಗ್ ಹುದ್ದೆಗಳ ನೇಮಕಾತಿ ಅಧಿಸೂಚನೆಯಲ್ಲಿ ಕರಡು ವಾಚಕ –01 (ಪ.ಪಂ), ಬಡಿಗ/ಪೇಂಟರ್(ಪ.ಪಂ) ಮತ್ತು ಇಲೆಕ್ಟ್ರೀಷಿಯನ್ (ಪ.ಜಾ) ಹುದ್ದೆಗಳಿಗೆ ಹೀಗೆ ಒಟ್ಟು 03 ಹುದ್ದೆಗಳಿಗೆ ಮಾತ್ರ ಅರ್ಜಿಗಳನ್ನು ಅಹ್ವಾನಿಸಿದ್ದು ಇರುತ್ತದೆ. ಸದರಿ ಅರ್ಜಿಗಳ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿದ್ದು, ಈ ಕುರಿತಾಗಿ ಕರ್ನಾಟಕ ವಿಶ್ವವಿದ್ಯಾಲಯವು ಯಾವುದೇ ಆಯ್ಕೆಗೆ ಸಂಬಂಧಿಸಿದ ಯಾದಿಯನ್ನು ಅಂತಿಮಗೊಳಿಸಿ, ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಥವಾ ಬೇರೆ ಯಾವುದೇ ಮಾಧ್ಯಮದ ಮೂಲಕ ಪ್ರಕಟಿಸಿರುವುದಿಲ್ಲ.

ಆದರೆ ಕರ್ನಾಟಕ ವಿಶ್ವವಿದ್ಯಾಲಯದ ಹೆಸರು ಮತ್ತು ಲಾಂಛನವನ್ನು ಯಾರೋ ದುಷ್ಕರ್ಮಿಗಳು ದುರ್ಬಳಕೆ ಮಾಡಿಕೊಂಡು ನಕಲಿ ತಾತ್ಕಾಲಿಕ ಯಾದಿಯನ್ನು ಪ್ರಚಾರಪಡಿಸಿರುವುದು ಮತ್ತು ಅದನ್ನು ಕೆಲ ಅಭ್ಯರ್ಥಿಗಳ ಮೊಬೈಲ್‌ಗಳಿಗೆ ಹರಿಬಿಟ್ಟಿರುವುದು ವಿಶ್ವವಿದ್ಯಾಲಯದ ಗಮನಕ್ಕೆ ಬಂದಿರುತ್ತದೆ. ಇದರಲ್ಲಿ ಒಟ್ಟು 28 ಹುದ್ದೆಗಳು ಎಂದು ಕಾಣಿಸಲಾಗಿದೆ ಅವುಗಳ ಪೈಕಿ 19 ಪ.ಜಾ./ಪ.ಪಂ ಮತ್ತು 09 ಹಿಂದುಳಿದ ವರ್ಗಗಳ ಹುದ್ದೆಗಳು ಎಂದು ಕಾಣಿಸಲಾಗಿದೆ. ಈ ರೀತಿಯಾಗಿ ನಕಲಿ ಆಯ್ಕೆ ಪಟ್ಟಿಯನ್ನು ಸೃಷ್ಟಿಸಿ ಹರಿಬಿಟ್ಟು ಅಮಾಯಕ ಅಭ್ಯರ್ಥಿಗಳನ್ನು ಬಲೆಗೆ ಬೀಳಿಸಿ ಮೋಸ ಮಾಡುವ ಎಲ್ಲ ಸಾಧ್ಯತೆಗಳಿರುವುದರಿಂದ ಅಂತಹ ಮೋಸ ಮತ್ತು ದುಷ್ಕೃತ್ಯ ಎಸಗಿರುವ ವ್ಯಕ್ತಿಗಳಿಂದ ಸಾರ್ವಜನಿಕರು ಎಚ್ಚರಿಕೆಯನ್ನು ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಅಂತಹ ಪ್ರಕರಣಗಳು ಕಂಡುಬಂದಲ್ಲಿ ಸಾರ್ವಜನಿಕರು ಪೊಲೀಸ್ ದೂರು ನೀಡುವಂತೆ ಮತ್ತು ವಿಶ್ವವಿದ್ಯಾಲಯದ ಅಂತರ್ಜಾಲ ವಿಳಾಸ registrar@kud.ac.in ಅಥವಾ dparkud@gmail.com ಈ ವಿಳಾಸಕ್ಕೆ ಮಾಹಿತಿಯನ್ನು ನೀಡಲು ಸಾರ್ವಜನಿಕರಲ್ಲಿ ಕೋರಲಾಗಿದೆ.

A. Channappa
ಕುಲಸಚಿವರು